ಸರಿ ಅಲ್ಲಿಗೆ ತನ್ನ ಹೀರೋವನ್ನು ಶೋಧಿಸಿ ಫ್ರೆಂಡ್ ರಿಕ್ವೆಸ್ಟ್ ಕಳಿಸಿದಳು. ಅವರೋ ಬರಗೆಟ್ಟ ಹಾಗೆ ಕೂತಿದ್ದರು ಅನ್ನಿಸುತ್ತೆ, ಇವಳು ಕಳಿಸಿದ್ದೇ ತಡ ಅದನ್ನ ಒಪ್ಪಿಕೊಂಡುಬಿಟ್ಟು ಅವಳ ಹತ್ತಿರ ಖಾಸಗೀ ಚಾಟ್‌ನಲ್ಲಿ ಮಾತನಾಡಲು ಶುರು ಮಾಡಿದರು.

ಒಂದು ನಾಲ್ಕೈದು ದಿನ ಸ್ವಲ್ಪ ಸಂಕೋಚದಿಂದಲೇ ಚುಟುಕು ಉತ್ತರ ಕೊಟ್ಟು ಸುಮ್ಮನಾಗುತ್ತಿದ್ದವಳಿಗೆ ಆಮೇಲೆ ತೀರಾ ಖಾಸಗೀ ವಿಷಯಗಳ ಬಗ್ಗೆ ಎನ್ಕ್ವೈರಿ ಶುರು ಮಾಡಿದ ತಕ್ಷಣ ಯಾಕೋ ತಲೆ ಧಿಂ ಎಂದಿದೆ.

"ಅಕ್ಕಾ... ಯಾಕೋ ಆವಣ್ಣ ಸರಿ ಇಲ್ಲ ಅನುಸ್ತತಿ ಕಣೆ..."

"ಯಾಕೆ?"

"ಸುಮ್ ಸುಮ್ನ ಏನೇನೋ ಮಾತಾಡ್ತತಿ... ನಿನ್ ಗಂಡ ಅದಾನಾ ಇಲ್ಲಾ? ಅಂತೆಲ್ಲಾ ಕೇಳ್ತತಿ... ಇದುಕ್ಯಾಕ ಬೇಕು ನನ್ ಗಂಡನ ಉಸಾಬರಿ?"

"ಅಲ್ಲಾ ಮತ್ತ ಮ್ಯಾಲ ಬಿದ್ದು ಬಂದೀ ಅಂತ ತಿಳಕಂಡಿರಬೇಕು ನೋಡು?"

"ಅಲ್ಲೇ ಅದೆಂಗ ಮ್ಯಾಲ ಬಿದ್ದು ಹೋದಂಗಾತು? ಅವರು ಬರದಿರಾದನ್ನೆಲ್ಲಾ ಓದತವಿ ಅಂತಂದ ಮಾತ್ರಕ್ಕ ಅವ್ರ ಕೂಡ ಸಂಸಾರ ಮಾಡಾಕ ಬರ್ತವಿ ಅಂತ ಅರ್ಥ ಏನು?"

ಬಹುತೇಕ ಜೀವನವನ್ನು ಹಳ್ಳಿಯಲ್ಲೇ ಕಳೆದಿದ್ದ ಅವಳ ಪ್ರಶ್ನೆ ಚೂಪಾದ ಭರ್ಜಿಯಷ್ಟೇ ಸ್ಪಷ್ಟವಾಗಿತ್ತು. ಅಭಿಮಾನ ಬೇರೆ. ಆಸಕ್ತಿ ಬೇರೆ. ಎರಡನ್ನೂ ಪ್ರತ್ಯೇಕಿಸಿ ನೋಡಲು ಎಲ್ಲರಿಗೂ ಸಾಧ್ಯವಿರಬೇಕು, ಬರಹ ಮೆಚ್ಚಿದ ಮಾತ್ರಕ್ಕೆ ಮಾತಿಗೆ ಸಿಗುತ್ತಾಳೆ, ಮಾತಿಗೆ ಸಿಕ್ಕ ಮೇಲೆ ಬೇರೆ ಎಲ್ಲದಕ್ಕೂ ಸಿಗುತ್ತಾಳೆ ಅಂತ ಥೇಟ್ ನೈಜ ಜಗತ್ತಿನ ಹಾಗೇ ಅವಸರದ ಪೂರ್ವಗ್ರಹದ ನಿರ್ಧಾರಗಳು ಬೇಕಾದಷ್ಟು ಜನಗಳಿಗೆ ಇದೆ.

ಗಂಡಸರೂ ಇಂತಹ ಹಲವಾರು ಅನುಭವಗಳನ್ನು ಪಟ್ಟಿ ಮಾಡಬಹುದು. ಮುಂಬೈನಲ್ಲಿ ಕೆಲ ಸಮಾನ ಮನಸ್ಕರ ಗುಂಪೊಂದು ಇದೆ. ಕಲೆ, ಸಾಹಿತ್ಯ, ರಾಜಕೀಯ, ಸಾಮಾಜಿಕ ಕಾಳಜಿ ಹೀಗೆ ಸಾಕಷ್ಟು ವಿಷಯಗಳ ಬಗ್ಗೆ ಚರ್ಚಿಸುತ್ತಾ, ಯಾರಿಗಾದರೂ ಬೆಂಬಲ ಬೇಕಾದಲ್ಲಿ ನೀಡುತ್ತಾ ತಮ್ಮ ಮಿತಿಯಲ್ಲಿ ಒಬ್ಬರಿಗೊಬ್ಬರು ಅನುವಾಗುತ್ತಾ ಇರುತ್ತಾರೆ.

ಈ ಗುಂಪಿನಲ್ಲಿ ಗಂಡು ಹಾಗೂ ಹೆಣ್ಣು ಸದಸ್ಯರ ಸಂಖ್ಯೆ ಸಮಾನವಾಗಿದೆ. ಅದರಲ್ಲಿ ಒಬ್ಬನ/ಳ ಪ್ರವೇಶವಾಯಿತು. ಒಂದೇ ವ್ಯಕ್ತಿ ಎರಡು ಗುರುತುಗಳನ್ನು ಸೃಷ್ಟಿ ಮಾಡಿಕೊಂಡು ಆಗಾಗ ಅಲ್ಲಿನ ಜನಕ್ಕೆ ಹಿತ ಎನ್ನಿಸುವ ಹಾಗೆ ಮಾತನಾಡುತ್ತಾ, ಇನ್‌ಬಾಕ್ಸಿನಲ್ಲಿ ಇನ್ನೇನೋ ಕರುಣಾಜನಕ ಕತೆ ಹೇಳುತ್ತಾ ತನ್ನ ಚಾಕಚಕ್ಯತೆಯನ್ನು ಪ್ರದರ್ಶನ ಮಾಡಿಬಿಟ್ಟಿತ್ತು!

ಸರಾಸರಿ ಮೂರು ತಿಂಗಳ ಕಾಲದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಯಷ್ಟು ಹಣವನ್ನು ವಿವಿಧ ಸದಸ್ಯರಿಂದ ಎತ್ತಿಬಿಟ್ಟಿತ್ತು ಈ ವ್ಯಕ್ತಿ. ಈ ವಿಷಯ ಬೆಳಕಿಗೆ ಬಂದಿದ್ದಾದರೂ ಹೇಗೆ ಅಂತೀರಿ!

ಒಬ್ಬರ ಹತ್ತಿರ ದುಡ್ಡು ತೆಗೆದುಕೊಂಡ ತಕ್ಷಣ ಗುಂಪಿನಿಂದ ನಿರ್ಗಮಿಸಲಿಲ್ಲ... ಅಲ್ಲೇ ಇದ್ದು ವಿಶ್ವಾಸ ಗಳಿಸಿಕೊಂಡು ಸ್ವಲ್ಪ ಹಣ ಮರಳಿಸಿತು. ನಂತರ ಇನ್ನೊಬ್ಬರ ಹತ್ತಿರ ಮೊದಲಿನವರ ಹತ್ತಿರ ಎತ್ತಿದ್ದಕ್ಕಿಂತ ಎರಡು ಪಟ್ಟು ಹಣ ಎತ್ತಿತು. ಹೀಗೆ ಒಬ್ಬರ ನಂತರ ಇನ್ನೊಬ್ಬರ ಸರದಿ ಮುಂದುವರೆಯಿತು. ಒಂದು ದಿನ ಇದ್ದಕ್ಕಿದ್ದ ಹಾಗೆ ಗುಂಪಿನಿಂದ ಕಾಣೆಯಾಗಿ ವಾರ ಕಳೆದ ಮೇಲೆ ಒಬ್ಬೊಬ್ಬರಾಗಿ ಸ್ಕ್ರೀನ್ ಶಾಟ್ ಹಾಕಿ ಕತೆ ಬಿನ್ನವಿಸಿಕೊಂಡರು. ಆದರೇನು ಮಾಡುವುದು? ಸಾಮೂಹಿಕವಾಗಿ ಹಣ ಕಳೆದುಕೊಂಡಾಗಿತ್ತು!

ಈ ಸ್ಕ್ರೀನ್ ಶಾಟುಗಳೆಂಬ ಇನ್ನೊಂದು 'ಮಾರಕಾಸ್ತ್ರ'ದ ಬಗ್ಗೆ ಹೇಳಬೇಕು. ಯಾರೋ ಯಾವಾಗಲೋ ಯಾವುದೋ ವಿಷಯಕ್ಕೆ ಹೇಳಿದ ಮಾತು ಮತ್ಯಾವಾಗಲೋ ಬಳಕೆಯಾಗುವುದು